ವೃಕ್ಷಲಕ್ಷ್ಮಿ ಪ್ರಶಸ್ತಿ ಪ್ರದಾನ

# ಪರಿಸರ ರಕ್ಷಣೆಯ ಯೋಜನೆಗಳು ಕಾಗದದಲ್ಲಿದ್ದರೆ ಫಲವಿಲ್ಲ: ವಿಷ್ಣುಮಯಾನಂದಶ್ರೀ



ಶಿರಸಿ, ನ.15: ಪಶ್ಚಿಮಘಟ್ಟದ ಪರಿಸರ ಉಳಿಸುವ ಜವಾಬ್ದಾರಿ ಯುವಜನತೆ ಮತ್ತು ಬಾಲಕ ಬಾಲಕಿಯರ ಮೇಲಿದೆ. ಪರಿಸರ ರಕ್ಷಣೆಯ ಯೋಜನೆಗಳು ಪುಸ್ತಕದಲ್ಲಿ ಅಥವಾ ಕಾಗದದಲ್ಲೇ ಇದ್ದರೆ ಯಾವುದೇ ಪ್ರಯೋಜನವಿಲ್ಲ ಎಂದು ಶಿವೇನಹಳ್ಳಿಯ ಶ್ರೀ ರಾಮಕೃಷ್ಣ ಮಿಷನ್‌ನ ಶ್ರೀ ವಿಷ್ಣುಮಯಾನಂದ ಸ್ವಾಮಿಗಳು ಹೇಳಿದ್ದಾರೆ.

ಮೂರು ದಿನಗಳ ಕಾಲ ನಡೆದ ಕೆರೆ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ವೃಕ್ಷಲಕ್ಷ್ಮಿ ಪರಿಸರ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡುತ್ತಿದ್ದರು.

ನಮಗೀಗ ವಯಸ್ಸಾಗಿದೆ. ಕಾಲವೂ ಮುಗಿಯುತ್ತಿದೆ. ಇರುವ ಗಿಡ, ಮರಮಟ್ಟು ಮೊದಲು ಉಳಿಸಿಕೊಳ್ಳಬೇಕು. ದಿನನಿತ್ಯ ಪರಿಸರದ ಅಳಿವು ಆಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿ, ಸಮ್ಮೇಳನದಲ್ಲಿ ಹಲವು ವಿದ್ಯಾರ್ಥಿಗಳು ಪರಿಸರ ಉಳಿಸುವ ಕುರಿತು ಪ್ರಬಂಧ ಮಂಡನೆ ಮಾಡಿದ್ದಾರೆ. ಅವು ಕಾಗದದ ರೂಪದಲ್ಲಿದ್ದರೆ ಪ್ರಯೋಜನವಿಲ್ಲ ಎಂದರು.

ಉಡುಪಿಯ ಪೇಜಾವರದ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳು ಮತ್ತು ಸ್ವರ್ಣವಲ್ಲೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳು ಪ್ರಶಸ್ತಿ ಪ್ರದಾನ ಮಾಡಿದರು.

(ಮುಂದುವರಿಯುವುದು)